**CC 486/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 486/2023**

**ಸಿ ಡಬ್ಲೂ 1**
**ಪಿ ಡಬ್ಲೂಃ 1**

**ಸಾಕ್ಷಿಯ ಹೆಸರು - ಆರ್. ಮಹಮ್ಮದ್ ಬೇಗ್**
**ತಂದೆಯ ಹೆಸರು - ರಸೂಲ್ ಬೇಗ್**
**ವಯಸ್ಸು - 55 ವರ್ಷಗಳು**
**ಉದ್ಯೋಗ - ಎ ಎಸ್ ಐ, ಪಟ್ಟಣ ಪೋ. ಠಾ.**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 12-06-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **20-06-2022** ರಿಂದ ಇಲ್ಲಿಯವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **18-10-2022** ರಂದು ಮಧಾಹ್ನ **02.00** ಗಂಟೆಯಿಂದ ಠಾಣಾ ಸರಹದ್ದಿನಲ್ಲಿ ಗಸ್ತು ತಿರುಗುವ ಕರ್ತವ್ಯದಲ್ಲಿ ಇದ್ದೆ. ನಾನು ರಾಮಾ ಸರ್ಕಲ್, ವಾಲ್ಮೀಕಿ ಸರ್ಕಲ್, ಆಕಾಶವಾಣಿ, ಜಂಬುನಾಥ ರಸ್ತೆ, ಬಳ್ಳಾರಿ ರಸ್ತೆ ಸರ್ಕಲ್, ಮೂರು ಅಂಗಡಿ ಸರ್ಕಲ್, ಕಾಮಧೇನು ಸ್ವೀಟ್ ಕಾರ್ನರ್ ನಲ್ಲಿ ಗಸ್ತು ತಿರುಗಿರುತ್ತೇನೆ. ಸದರಿ ಸ್ವೀಟ್ ಕಾರ್ನರ್ ಬಳಿ ಇದ್ದಾಗ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ ನಕಲಿ ಬಂಗಾರದ ನಾಣ್ಯಗಳನ್ನು ಅಸಲಿ ಬಂಗಾರದ ನಾಣ್ಯಗಳು ಎಂದು ಮೂರು ಜನರು ಸಾರ್ವಜನಿಕರಿಗೆ ಮಾರುತ್ತಿರುವುದಾಗಿ ಬಾತ್ಮಿ ಬಂದಿತ್ತು. ನಾನು ಕೂಡಲೇ ಆರಕ್ಷಕ ನಿರೀಕ್ಷಕರಿಗೆ ಸದರಿ ವಿಚಾರ ತಿಳಿಸಿರುತ್ತೇನೆ. ನಾನು ಠಾಣೆಗೆ ಹೋಗಿ ಸದರಿ ಮಾಹಿತಿಯನ್ನು ತಿಳಿಸಿರುತ್ತೇನೆ.

ನಾನು ಮತ್ತು ಚಾಸಾ **-6** ರಿಂದ **9** ರವರು ಆರಕ್ಷಕ ನಿರೀಕ್ಷಕರ ಆದೇಶದ ಮೇರೆಗೆ ದಾಳಿ ಮಾಡಲು ಸಜ್ಜಾಗಿದ್ದೇವು. ಸಂಜೆ **06.00** ಗಂಟೆಗೆ ಸದರಿಯವರೊಂದಿಗೆ ಕೆ ಎಸ್ ಆರಿ ಟಿ ಸಿ ಬಸ್ ನಿಲ್ದಾಣದ ಒಳಗಡೆ ಹೋಗಿ ಹುಡುಕಾಡಿರುತ್ತೇವೆ. ನಮ್ಮೊಂದಿಗೆ ಇಬ್ಬರು ಪಂಚರನ್ನು ಸಹ ಕರೆದುಕೊಂಡು ಹೋಗಿದ್ದೇವು. ಬಸ್ ನಿಲ್ದಾಣದ ಪಾರ್ಸಲ್ ಕಚೇರಿಯ ಹತ್ತಿರ ಮೂರು ಜನರು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ನಾನು ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಇಬ್ಬರನ್ನು ಹಿಡಿದಿರುತ್ತೇವೆ. ಒಬ್ಬ ವ್ಯಕ್ತಿ ಅಲ್ಲಿಂದ ಪರಾರಿಯಾದ. ನಾವು ಹಿಡಿದಿದ್ದ ಆರೋಪಿತರ ಹೆಸರನ್ನು ಕೇಳಲಾಗಿ ನಾಗರಾಜ ತಂದೆ ರಾಜೇಂದ್ರ, ಸಾಃ ಕೂಡ್ಲಗಿ ಮತ್ತು ಕಿರಣ್ ತಂದೆ ಕಳಕನಗೌಡ, ಸಾಃ ಕೂಡ್ಲಗಿ ಎಂದು ತಿಳಿಸಿದರು. ನಂತರ ಪರಾರಿಯಾದ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಆತನ ಹೆಸರು ತಿಮ್ಮಣ್ಣ, ಸಾಃ ಪವನಪುರ, ತಾಃ ಹರಪನಹಳ್ಳಿ ಎಂದು ತಿಳಿಸಿದರು. ಸದರಿ ಆರೋಪಿತರು ಹಿಡಿದುಕೊಂಡಿದ್ದ ಒಂದು ಕೆಂಪು ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಅದರಲ್ಲಿ ನಾಣ್ಯಗಳು ಇದ್ದದ್ದು ಕಂಡು ಬಂದಿತ್ತು. ಅವುಗಳು ಏನು ಎಂದು ಕೇಳಿದಾಗ **1** ನೇ ಆರೋಪಿ ನಕಲಿ ಬಂಗಾರದ ನಾಣ್ಯಗಳು ಎಂದು ತಿಳಿಸಿದ. **1** ನೇ ಆರೋಪಿಯು ತಾನು ಅಕ್ಕಸಾಲಿಗನಾಗಿದ್ದು, ಸದರಿ ನಾಣ್ಯಗಳನ್ನು ತಾನೇ ತಯಾರಿಸಿರುವುದಾಗಿ ತಿಳಿಸಿದ. ಸದರಿ ನಾಣ್ಯಗಳನ್ನು ಸಾರ್ವಜನಿಕರಿಗೆ ಮೋಸ ಮಾಡಿ ಮಾರಾಟ ಮಾಡಲು ತೆಗೆದುಕೊಂಡು ಬಂದಿರುವುದಾಗಿ ಆರೋಪಿತರು ತಿಳಿಸಿದರು. **1** ನೇ ಆರೋಪಿಯ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟ್ ನ ಎಡ ಜೇಬಿನಲ್ಲಿ ರೂ. **500/-** ಗಳ **4** ನೋಟುಗಳು ದೊರೆತವು. ಆತನ ಅಂಗಿಯ ಜೇಬಿನಲ್ಲಿ ಲಾವಾ ಕಂಪನಿಯ ಕೀ ಪ್ಯಾಡ್ ಮೊಬೈಲ್ ದೊರೆಯಿತು. **2** ನೇ ಆರೋಪಿಯ ಹತ್ತಿರ ಯಾವುದೇ ಮು ಮಾ ದೊರೆಯಲಿಲ್ಲ.

**CC 486/2023**

**ಸಿ ಡಬ್ಲೂ 1**

**ಪಿ ಡಬ್ಲೂ: 1**

ಸ್ಥಳಕ್ಕೆ ಮಹಮ್ಮದ್ ಗೌಸ್ ಎಂಬ ಅಕ್ಕಸಾಲಿಗನನ್ನು ಚಾಸಾ -8 ರವರು ಕರೆದುಕೊಂಡು ಬಂದರು. ಸದರಿಯವರು ನಾಣ್ಯಗಳನ್ನು ನೋಡಿ ನಕಲಿ ನಾಣ್ಯಗಳು ಎಂದು ತಿಳಿಸಿದರು. ಅವರು ತಂದಿದ್ದ ಯಂತ್ರದಲ್ಲಿ ತೂಕ ಮಾಡಿ ನೋಡಿದಾಗ 2.606 ಕೆ ಜಿ ಇದ್ದವು. ಸದರಿ ನಾಣ್ಯಗಳನ್ನು, ಆರೋಪಿಯಿಂದ ವಶಪಡಿಸಿಕೊಂಡಿದ್ದ ರೂ. 2,000/- ಗಳನ್ನು ಮತ್ತು ಲಾವಾ ಕೀ ಪ್ಯಾಡ್ ಮೊಬೈಲ್ ನ್ನು ಚಾಸಾ -2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡೆವು. ಸದರಿ ಪಂಚನಾಮೆಯನ್ನು ಸಂಜೆ 06.15 ರಿಂದ 07.30 ರವರೆಗೆ ಮಾಡಲಾಗಿತ್ತು. ಪಂಚನಾಮೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಕಚ್ಚಾ ನಕಾಶೆ ತಯಾರಿಸಲಾಗಿತ್ತು ಮತ್ತು ಫೋಟೋಗಳನ್ನು ತೆಗೆಯಲಾಗಿತ್ತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 3 ಫೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಫೋಟೋಗಳನ್ನು ಒಟ್ಟಾಗಿ ನಿಪಿಃ 3 ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಕರೆದುಕೊಂಡು, ವಶಪಡಿಸಿಕೊಂಡಿದ್ದ ಮು ಮಾ ತೆಗೆದುಕೊಂಡು ಠಾಣೆಗೆ ಹಿಂತಿರುಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರುನ್ನು ನೋಡಿದರೆ ಗುರುತಿಸಿರುತ್ತಾರೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು ಅದನ್ನು ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4 (ಎ) ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಮು ಮಾ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಕಲಿ ನಾಣ್ಯಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು ಮಾ **1** ಎಂದು ಗುರುತಿಸಲಾಯಿತು. ಸಾಕ್ಷಿ ರೂ. **500** ರ **4** ನೋಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು ಮಾ **2** ಎಂದು ಗುರುತಿಸಲಾಯಿತು. ಸಾಕ್ಷಿ ಲಾವಾ ಕೀಪ್ಯಾಡ್ ಮೊಬೈಲ್ ನೋಡಿ ಗುರುತಿಸಿದ್ದು, ಅದನ್ನು ಮು ಮಾ **3** ಎಂದು ಗುರುತಿಸಲಾಯಿತು.

ಈ ದಿನ ಆರೋಪಿತರು ಗೈರು ಹಾಜರು ಇದ್ದು, ಸದರಿಯವರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಆರ್ ಪಿ., ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ನ್ಯಾಯದಾನದ ದೃಷ್ಟಿಯಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.